ವಿದ್ಯುತ್ ನಿಯಂತ್ರಣ ಆಯೋಗಕ್ಕೆ ನೀಡಿದ ಅನುದಾನ

237 (13) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :– ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2009–10 ಮತ್ತು 2010–11ರ ಸಾಲಿನಲ್ಲಿ ಸರ್ಕಾರವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಎಷ್ಟು ಸಹಾಯ ಅನುದಾನ ನೀಡಿದೆ.

ಆ) ಬಜೆಟ್‌ನಲ್ಲಿ ಎಷ್ಟು ಮೊತ್ತವನ್ನು ಸಹಾಯ ಅನುದಾನಕ್ಕಾಗಿ ಕಾಯ್ದಿರಿಸಲಾಗಿತ್ತು.

ಇ) ಸಹಾಯ ಅನುದಾನವನ್ನು ಯಾವ ಯಾವ ಬಾಬ್ತುಗಳಿಗಾಗಿ ವಿಚ್ರ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಶೋಭಾ ಕರಂದ್ಲಾಜೆ (ಇಂಧನ ಸಚಿವರು):–

ಅ) 2009–10ನೇ ಸಾಲಿನಲ್ಲಿ ರೂ. 187.63 ಲಕ್ಷಗಳಷ್ಟು, 2010–11ನೇ ಸಾಲಿನಲ್ಲಿ ರೂ. 211.41 ಲಕ್ಷಗಳಷ್ಟು ಸರ್ಕಾರವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಹಾಯ ಅನುದಾನ ನೀಡಿದೆ.

ಆ) 2009–10ನೇ ಸಾಲಿನಲ್ಲಿ ರೂ. 190.00 ಲಕ್ಷಗಳಷ್ಟು ಮತ್ತು 2010–11ನೇ ಸಾಲಿನಲ್ಲಿ ರೂ. 213.00 ಲಕ್ಷಗಳಷ್ಟು ಹಣವನ್ನು ಸರ್ಕಾರವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಹಾಯ ಅನುದಾನ ಕಾಯ್ದಿರಿಸಲಾಗಿತ್ತು.

ಇ) ಕರ್ನಾಟಕ ವಿದ್ಯುತ್ ಸುಧಾರಣ ಕಾಯಿದೆ 1999 ಸೆಕ್ಷನ್ 8(4)ರ ಪ್ರಕಾರ ಸರ್ಕಾರವು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ನೀಡುವ ಸಹಾಯ ಅನುದಾನವನ್ನು ಆಯೋಗದ ಸದಸ್ಯರ ಸಂಬಳ ಮತ್ತು ಭತ್ಯೆ, ಆಡಳಿತಾತ್ಮಕ ವೆಚ್ಚಗಳು ಹಾಗೂ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ನೌಕರರುಗಳ ಸಂಬಳ ಮತ್ತು ಭತ್ಯೆ, ಪಿಂಚಣಿ ವಿಚ್ರ್ಗಳನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.